''ಸಂಪೂರ್ಣ ಪವಿತ್ರರಾಗಿ ಸಂಸ್ಕಾರ ಮಿಲನವನ್ನು ಆಚರಿಸಿ ಇದೇ ಸತ್ಯ ಹೋಳಿಯಾಗಿದೆ''

ಇಂದು ಬಾಪ್ದಾದಾರವರು ನಾಲ್ಕಾರು ಕಡೆಯ ತಮ್ಮ ಹೋಲಿಯಸ್ಟ್ ಹಾಗೂ ಹೈಯೆಸ್ಟ್ ಮಕ್ಕಳನ್ನು ನೋಡುತ್ತಿದ್ದರು. ವಿಶ್ವದಲ್ಲಿ ಎಲ್ಲರಿಗಿಂತ ಹೈಯೆಸ್ಟ್ ಶ್ರೇಷ್ಠಾತಿ ಶ್ರೇಷ್ಠ ತಾವು ಮಕ್ಕಳ ಹೊರೆತು ಬೇರೆ ಯಾರಾದರೂ ಇದ್ದಾರೆಯೇ? ಏಕೆಂದರೆ ತಾವೆಲ್ಲರೂ ಶ್ರೇಷ್ಠಾತಿ ಶ್ರೇಷ್ಠ ತಂದೆಯ ಮಕ್ಕಳಾಗಿದ್ದೀರಿ. ಇಡೀ ಕಲ್ಪದಲ್ಲಿ ಚಕ್ರ ಹಾಕಿ ನೋಡಿದರೆ ಎಲ್ಲರಿಗಿಂತ ಶ್ರೇಷ್ಠ ಪದವಿಯವರು ಬೇರೆ ಯಾರಾದರೂ ಕಾಣಿಸುತ್ತಾರೆಯೇ? ರಾಜ್ಯ ಅಧಿಕಾರಿ ಸ್ವರೂಪದಲ್ಲಿಯೂ ಸಹ ಬೇರೆ ಯಾರಾದರೂ ನಿಮಗಿಂತ ಶ್ರೇಷ್ಠ ರಾಜ ಅಧಿಕಾರಿಗಳು ಆಗಿದ್ದಾರೆಯೇ? ನಂತರ ಪೂಜೆ ಹಾಗೂ ಗಾಯನದಲ್ಲಿ ನೋಡಿ ಎಷ್ಟು ವಿಧಿಪೂರ್ವಕವಾಗಿ ನೀವು ಆತ್ಮಗಳ ಪೂಜೆಯಾಗುತ್ತದೆ ಅದಕ್ಕಿಂತ ಹೆಚ್ಚಾಗಿ ಬೇರೆ ಯಾರ ಪೂಜೆಯಾದರೂ ಆಗುತ್ತದೆಯೇ? ಎಷ್ಟು ಶ್ರೇಷ್ಠ ಡ್ರಾಮದ ಅದ್ಭುತ ರಹಸ್ಯ ವಾಗಿದೆ- ನೀವು ಸ್ವಯಂ ಚೈತನ್ಯ ಸ್ವರೂಪದಲ್ಲಿ ಈ ಸಮಯ ತಮ್ಮ ಪೂಜ್ಯ ಸ್ವರೂಪವನ್ನು, ಜ್ಞಾನದ ಮೂಲಕ ತಿಳಿದುಕೊಂಡಿದ್ದೀರಿ ಹಾಗೂ ನೋಡುತ್ತಾ ಇದ್ದೀರಿ. ಒಂದು ಕಡೆ ತಾವು ಚೈತನ್ಯ ಆತ್ಮಗಳಿರುವಿರಿ ಹಾಗೂ ಇನ್ನೊಂದು ಕಡೆ ನಿಮ್ಮ ಜಡ ಚಿತ್ರ ಪೂಜ್ಯ ರೂಪದಲ್ಲಿದೆ. ತಮ್ಮ ಪೂಜ್ಯ ಸ್ವರೂಪವನ್ನು ನೋಡುತ್ತಿರುವಿರಾ? ಜಡ ರೂಪದಲ್ಲಿಯೂ ಇದ್ದೀರಿ ಹಾಗೂ ಚೈತನ್ಯ ರೂಪದಲ್ಲಿಯೂ ಇದ್ದೀರಿ. ಎಂದ ಮೇಲೆ ಅದ್ಭುತವಾದ ಆಟ ಆಗಿದೆ ಅಲ್ಲವೇ! ಹಾಗೂ ರಾಜ್ಯದ ಲೆಕ್ಕದಲ್ಲಿಯೂ ಸಹ ಇಡೀ ಕಲ್ಪದಲ್ಲಿ ನಿರ್ವಿಘ್ನ, ಅಖಂಡ- ಅಟಲ ರಾಜ್ಯ ನೀವು ಆತ್ಮರದಷ್ಟೇ ನಡೆಯುತ್ತದೆ. ರಾಜರಂತು ಬಹಳಷ್ಟು ಜನರು ಆಗುತ್ತಾರೆ ಆದರೆ ನೀವು ವಿಶ್ವ ರಾಜನ್ ಅಥವಾ ವಿಶ್ವ ರಾಜನ ರಾಯಲ್ ಫ್ಯಾಮಿಲಿಯಲ್ಲಿ ಎಲ್ಲರಿಗಿಂತ ಶ್ರೇಷ್ಠರಾಗಿರುವಿರಿ. ಹಾಗಾದರೆ ರಾಜ್ಯದಲ್ಲಿಯೂ ಹೈಯೆಸ್ಟ್, ಪೂಜ್ಯ ರೂಪದಲ್ಲಿಯೂ ಹೈಯೆಸ್ಟ್ ಹಾಗೂ ಈಗ ಸಂಗಮದಲ್ಲಿಯೂ ಸಹ ಪರಮಾತ್ಮ ಆಸ್ತಿಯ ಅಧಿಕಾರಿ, ಪರಮಾತ್ಮ ಮಿಲನದ ಅಧಿಕಾರಿ ಪರಮಾತ್ಮನ ಪ್ರೀತಿಯ ಅಧಿಕಾರಿ ಪರಮಾತ್ಮನ ಪರಿವಾರದ ಆತ್ಮಗಳಾಗಿದ್ದೀರಿ, ಈ ರೀತಿ ಬೇರೆ ಯಾರಾದರೂ ಆಗುತ್ತಾರೆಯೇ? ನೀವೇ ಆಗಿದ್ದೀರಲ್ಲವೇ? ಆಗಿ ಹೋಗಿದ್ದಿರಾ ಅಥವಾ ಇನ್ನೂ ಆಗುತ್ತಿದ್ದೀರಾ? ಆಗಿ ಹೋಗಿದ್ದೀರಿ ಹಾಗೂ ಈಗಂತೂ ಆಸ್ತಿಯನ್ನು ತೆಗೆದುಕೊಂಡು ಸಂಪನ್ನರಾಗಿ ತಂದೆಯ ಜೊತೆ ಜೊತೆ ತನ್ನ ಮನೆಗೂ ಸಹ ಹೋಗುವವರಾಗಿದ್ದೀರಿ. ಸಂಗಮದ ಸುಖ, ಸಂಗಮ ಯುಗದ ಪ್ರಾಪ್ತಿಗಳು, ಸಂಗಮದ ಸಮಯ ಸುಂದರ ಎನಿಸುತ್ತದೆ ಅಲ್ಲವೇ! ತುಂಬಾ ಪ್ರಿಯ ಎನಿಸುತ್ತದೆ. ರಾಜ್ಯದ ಸಮಯಕ್ಕಿಂತ ಈ ಸಂಗಮದ ಸಮಯ ಪ್ರಿಯ ಎನಿಸುತ್ತದೆ ಅಲ್ಲವೇ? ಪ್ರೀತಿ ಇದೆಯೇ ಅಥವಾ ಬೇಗ ಹೋಗಲು ಬಯಸುತ್ತೀರಾ? ಹಾಗಾದರೆ ಏಕೆ ಕೇಳುತ್ತೀರಿ- ಬಾಬಾ ವಿನಾಶ ಯಾವಾಗ ಆಗುತ್ತದೆ? ಯೋಚಿಸುತ್ತಿರಿ ಅಲ್ಲವೇ- ಯಾವಾಗ ವಿನಾಶ ಆಗುತ್ತದೆಯೋ ಗೊತ್ತಿಲ್ಲ? ಏನಾಗುವುದು? ನಾವೆಲ್ಲಿ ಇರುತ್ತೇವೆ? ಬಾಪ್ದಾದಾರವರು ಹೇಳುತ್ತಾರೆ- ಎಲ್ಲಿಯೇ ಇದ್ದರೂ ನೆನಪಿನಲ್ಲಿ ಇರುವಿರಿ, ತಂದೆಯ ಜೊತೆ ಇರುವಿರಿ. ಸಾಕಾರದಲ್ಲಿ ಅಥವಾ ಆಕಾರದಲ್ಲಿ ಜೊತೆಯಲ್ಲಿದ್ದರೆ ಏನು ಆಗುವುದಿಲ್ಲ. ಸಾಕಾರದಲ್ಲಿ ಕಥೆಯನ್ನು ಕೇಳಿದಿರಲ್ಲವೇ. ಬೆಕ್ಕಿನ ಮರಿಗಳು ಬೆಂಕಿಯ ಮಧ್ಯದಲ್ಲಿ ಇದ್ದರೂ ಸಹ ಸುರಕ್ಷಿತವಾಗಿದ್ದರಲ್ಲವೇ? ಅಥವಾ ಸುಟ್ಟುಹೋದರಾ? ಎಲ್ಲರೂ ಸುರಕ್ಷಿತವಾಗಿದ್ದರು. ಎಂದ ಮೇಲೆ ನೀವು ಪರಮಾತ್ಮನ ಮಕ್ಕಳು ಯಾರು ಜೊತೆಯಲ್ಲಿ ಇರುತ್ತಾರೆ ಅವರು ಸುರಕ್ಷಿತವಾಗಿರುತ್ತಾರೆ. ಒಂದು ವೇಳೆ ಬೇರೆ ಎಲ್ಲಾದರೂ ಬುದ್ಧಿ ಹೋದರೆ ಯಾವುದಾದರೂ ಕಿಡಿ ಸಾಗುವುದು, ಏನಾದರೂ ಪ್ರಭಾವವಾಗುವುದು. ಜೊತೆಯಲ್ಲಿ ಕಂಬೈನ್ಡ್ ಆಗಿದ್ದರೆ, ಒಂದು ಸೆಕೆಂಡ್ ಸಹ ಒಬ್ಬಂಟಿಯಾಗಿ ಇಲ್ಲದೆ ಇದ್ದರೆ ಸುರಕ್ಷಿತವಾಗಿರುವಿರಿ. ಕೆಲವೊಮ್ಮೆ ಕೆಲಸ ಕಾರ್ಯದಲ್ಲಿ ಅಥವಾ ಸೇವೆಯಲ್ಲಿ ಒಬ್ಬಂಟಿ ಎಂದು ಅನುಭವ ಮಾಡುತ್ತೀರಾ? ಏನು ಮಾಡುವುದು ಒಬ್ಬರೇ ಇದ್ದೇವೆ, ಬಹಳ ಕೆಲಸವಿದೆ! ನಂತರ ದಣಿದು ಹೋಗುತ್ತೀರಿ. ಹಾಗಾದರೆ ಬಾಬಾರವರನ್ನು ಏಕೆ ಜೊತೆಗಾರರನ್ನಾಗಿ ಮಾಡಿಕೊಳ್ಳುವುದಿಲ್ಲ! ಎರಡು ಭುಜಗಳಿರುವವರನ್ನು ಜೊತೆಗಾರರನ್ನಾಗಿ ಮಾಡಿಕೊಳ್ಳುತ್ತೀರಿ, ಸಾವಿರ ಭುಜಗಳಿರುವವರನ್ನು ಏಕೆ ಜೊತೆಗಾರರನ್ನಾಗಿ ಮಾಡಿಕೊಳ್ಳುವುದಿಲ್ಲ. ಯಾರು ಬಹಳ ಸಹಯೋಗ ಕೊಡಲು ಸಾಧ್ಯ? ಸಾವಿರ ಭುಜದವರೇ ಅಥವಾ ಎರಡು ಭುಜದವರೇ?

ಸಂಗಮ ಯುಗದಲ್ಲಿ ಬ್ರಹ್ಮಾಕುಮಾರ ಅಥವಾ ಬ್ರಹ್ಮಾಕುಮಾರಿ ಒಬ್ಬಂಟಿಯಾಗಿ ಇರಲು ಸಾಧ್ಯವಿಲ್ಲ. ಕೇವಲ ಯಾವಾಗ ಸೇವೆಯಲ್ಲಿ, ಕರ್ಮ ಯೋಗದಲ್ಲಿ ಬಹಳ ವ್ಯಸ್ತರಾಗಿಬಿಡುತ್ತೀರಿ ಆಗ ಜೊತೆಯನ್ನು ಮರೆತು ಹೋಗುತ್ತೀರಿ ಹಾಗೂ ದಣಿದು ಹೋಗುತ್ತೀರಿ. ನಂತರ ಹೇಳುತ್ತೀರಿ ದಣಿದು ಹೋದೆವು, ಈಗ ಏನು ಮಾಡುವುದು! ದಣಿದಿಲ್ಲ ಯಾವಾಗ ಬಾಪ್ದಾದಾರವರು ನಿಮಗೆ ಸದಾ ಜೊತೆಯಾಗಿ ಇರಲು ಬಂದಿದ್ದಾರೆ, ಪರಮಧಾಮವನ್ನು ಬಿಟ್ಟು ಏಕೆ ಬಂದಿದ್ದಾರೆ? ಮಲಗುತ್ತಾ, ಏಳುತ್ತಾ, ಕರ್ಮ ಮಾಡುತ್ತಾ, ಸೇವೆ ಮಾಡುತ್ತಾ ಜೊತೆಯನ್ನು ಕೊಡುವುದಕ್ಕಾಗಿಯೇ ಬಂದಿದ್ದಾರೆ. ಬ್ರಹ್ಮಾ ತಂದೆಯು ಸಹ ನಿಮ್ಮೆಲ್ಲರಿಗೂ ಸಹಯೋಗವನ್ನು ಕೊಡುವುದಕ್ಕಾಗಿ ಅವ್ಯಕ್ತರಾಗಿದ್ದಾರೆ. ವ್ಯಕ್ತ ರೂಪಕ್ಕಿಂತ ಅವ್ಯಕ್ತ ರೂಪದಲ್ಲಿ ಸಹಯೋಗ ಕೊಡುವ ಗತಿ ತೀವ್ರವಾಗಿದೆ. ಆದ್ದರಿಂದ ಬ್ರಹ್ಮಾ ತಂದೆಯು ತನ್ನ ವತನವನ್ನು ಬದಲಾಯಿಸಿಕೊಂಡರು. ಹಾಗಾದರೆ ಶಿವ ತಂದೆ ಹಾಗೂ ಬ್ರಹ್ಮಾ ತಂದೆ ಇಬ್ಬರು ಪ್ರತಿ ಸಮಯ ನಿಮ್ಮೆಲ್ಲರ ಸಹಯೋಗ ಕೊಡುವುದಕ್ಕಾಗಿ ಸದಾ ಹಾಜರಾಗಿದ್ದಾರೆ. ನೀವು ಯೋಚಿಸಿ-`ಬಾಬಾ' ಹಾಗೂ ಸಹಯೋಗವನ್ನು ಅನುಭವ ಮಾಡುವಿರಿ. ಒಂದು ವೇಳೆ ಸೇವೆ ಸೇವೆ ಕೇವಲ ಇದೇ ನೆನಪಿದ್ದರೆ ತಂದೆಯನ್ನು ಬದಿಯಲ್ಲಿ

